ಈ) ಸಂಖ್ಯೆ ಆರ್‌ಡಿ 316 ಇಎಸ್‌ಆರ್ 90 ದಿನಾಂಕ 31-8-1991. ಆದೇಶದ ಸಂಖ್ಯೆ ಆರ್‌ಡಿ 313 ಇಎಸ್‌ಆರ್ 90 ದಿನಾಂಕ 8-3-1991ರ ತಿದ್ದೋಲೆ.

ಉಪಾಧ್ಯಕ್ಷಣಿಯವರು : ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಎಲ್.ಆರ್. ಶಿವರಾಮೇಗೌಡರವರ ಸದಸ್ಯತ್ವ ರದ್ದಾಗಿರುವ ಬಗ್ಗೆ

ಶ್ರೀ ಬಸವರಾಜ ರಾಯರೆಡ್ಡಿ : ಹೌಸ್ ಆರ್ಡರ್‌ನಲ್ಲಿ ಇದೆಯೇ ಎಂದು ಕೇಳುತ್ತಿದ್ದೇನೆ. ಏಕೆಂದರೆ, ನಾನು ಪತ್ರಿಕೆಗಳಲ್ಲಿ ಓದಿದೆ. ಸನ್ಮಾನ್ಯ ಸದಸ್ಯರಾದ ಶ್ರೀ ಶಿವರಾಮೇಗೌಡರ ಸದಸ್ಯತ್ವ ರದ್ದಾಗಿದೆಯೆಂದು. ಅವರು ಕಲಾಪದಲ್ಲಿ ಭಾಗವಹಿಸುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಅದಕ್ಕೆ ತಡೆ ಆಜ್ಞೆ ಬಂದಿದೆ. ನಮ್ಮ ಹೈಕೋರ್ಟ್‌ನಲ್ಲೇ ತಡೆ ಆಜ್ಞೆ ಕೊಟ್ಟಿದ್ದಾರೆ.

ಉಪಾಧ್ಯಕ್ಷರು : ಅವರು ಏನು ಹೇಳುತ್ತಾರೋ ಕೇಳೋಣ.

ಶ್ರೀ ವಾಟಾಳ್ ನಾಗರಾಜ್ : ನಾನು ಹೇಳುತ್ತೇನೆ. ನಾನು ಪತ್ರಿಕೆ ಓದಿದ ಪ್ರಕಾರ ಅವರಿಗೆ ತಡೆ ಆಜ್ಞೆ ಬಂದಿದೆ. ಅವತ್ತೇ ಬಂದಿದೆ. ಹಿಂದೆ ಈ ತರಹ ನನಗೂ ಆಗಿತ್ತು. ನನಗೂ ಆಗಿ ಸುಮಾರು 17 ವರ್ಷಗಳ ಕಾಲ ಈ ಸಭೆಗೆ ಬರುವುದಕ್ಕೆ ಆಡ್ಡಿ ಆತಂಕ ಎಲ್ಲಾ ಆಯಿತು. ಅವರು ಇಲ್ಲಿಗೆ ಬರಬಹುದು. ಈ ಸಭೆಯ ಸದಸ್ಯರಾಗಿ ಇರಬಹುದು. ಮಾತನಾಡಬಹುದು. ಕೆಲವು ಷರತ್ತುಗಳ ಮೇಲೆ ಅವರಿಗೆ ತಡೆ ಆಜ್ಞೆ ಬಂದಿದೆ. ಕೋರ್ಟಿನ ಆಜ್ಞೆಯನ್ನು ನಾವು ಪಾಲಿಸಬೇಕು. ನಾವೆಲ್ಲಾ ತಲೆಬಾಗಿದ್ದೇವೆ. ಅವರಿಗೆ ಈ ತರಹ ಆಯಿತಲ್ಲಾ ಎಂದು ನನಗೆ ನೋವಾಗಿದೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಅಧ್ಯಕ್ಷರೇ, ಸನ್ಮಾನ್ಯ ಸ್ನೇಹಿತರಾದ ಬಸವರಾಜ ರಾಯರೆಡ್ಡಿಯವರು ಕೇಳಿದ್ದು ಸರಿ. ಪತ್ರಿಕೆಗಳಲ್ಲಿ ಬಂದಿರತಕ್ಕದ್ದು ನಿಜ. ಕೋರ್ಟ್ ತೀರ್ಪು ಕೊಟ್ಟಿರತಕ್ಕಂಥಾದ್ದು ನಿಜ. ಆದರೆ, ಅದಕ್ಕೋಸ್ಕರ 60 ದಿವಸ ಟೈಮ್ ಇದೆ. ಅಷ್ಟರೊಳಗೆ ನಾನು ಸುಪ್ರೀಮ್ ಕೋರ್ಟ್‌ಗೆ ಹೋಗುತ್ತೇನೆ. ಸುಪ್ರೀಮ್ ಕೋರ್ಟ್ ತೀರ್ಮಾನ ಆಗುವವರೆಗೂ ಶಾಸಕನಾಗಿ ಇರತಕ್ಕಂಥಾದ್ದಕ್ಕೆ ಏನು ಆಡ್ಡಿ ಆತಂಕ ಇಲ್ಲ ಅನ್ನತಕ್ಕಂಥದನ್ನು ಸನ್ಮಾನ್ಯ ಸ್ನೇಹಿತರಿಗೆ ಹೇಳುತ್ತೇನೆ.

ನಿಯಮ 334 ರ ಮೇರೆಗೆ ಚರ್ಚೆ

1) ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್ ಕ್ಷೇತ್ರದ ಕಾಟಿಪಳ್ಳಿ ನಿರ್ವಸಿಕರು ಪಣಂಬೂರು ಸಹಕಾರ ಸಂಘದಿಂದ ಪಡೆದ ಸಾಲವನ್ನು ಮನ್ನಾ ಮಾಡುವುದು.

ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್) : ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್ ಕ್ಷೇತ್ರದ ಕಾಟಿವಳ್ಳಿ ಪ್ರದೇಶದಲ್ಲಿ ಶೇಕಡ 100ರಷ್ಟು ನಿರ್ವಸಿತರು ವಾಸವಾಗಿರುವ ಸ್ಥಳ, ಮಂಗಳೂರು ಬಂದರು, ಎಂ.ಸಿ.ಎಫ್. ಕಾರ್ಖಾನೆ, ಕುದುರೆಮುಖ ಕಬ್ಬಿಣ ಅದಿರು ಸ್ಥಾವರ, ಶಿಕ್ಷಣ ಇಲಾಖೆ ಮಜಗಾಂ ಡಾಕ್ಸ್(ಲಿ) ಇಂತಹ ಪ್ರಮುಖ ಉದ್ಯಮ ಸಂಸ್ಥೆಗಳಿಗೆ ತಮ್ಮ ಭೂಮಿ ಮತ್ತು ವಸತಿಯನ್ನು ಎರಡು ದಶಕಗಳ ಪೂರ್ವದಲ್ಲಿಯೇ ಖಾಲಿ ಮಾಡಿರುವ ನಿರ್ವಸಿತರ ನೋವುಗಳನ್ನು ಕಡಿಮೆಗೊಳಿಸಲು ಸರ್ಕಾರ ಸರ್ವಪ್ರಯತ್ನಗಳನ್ನೂ ಮಾಡಬೇಕಾದದ್ದು ಆದ್ಯ ಕರ್ತವ್ಯ. ಆದರೆ ಕಾಟಿವಳ್ಳಿ ಪ್ರದೇಶದ ನಿರ್ವಸಿತ ಯನಿರ್‌ವೇಶನ ಪ್ರಸಂಗದದಲ್ಲಿ ಪಣಂಬೂರು ವಿವಿಧೋದ್ದೇಶ ಸಹಕಾರಿ ಸಂಘದಿಂದ ತಲಾ 3 ಸಾವಿರ ರೂಪಾಯಿಗಳಂತೆ 18